# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ: 11 (32)/2010-11

ಟಿಪ್ಪಣಿಯಲ್ಲಿ ವಿವರಿಸುವಂತೆ, ಮಡಿವಾಳ ವಾಣಿಜ್ಯ ಸಂಕೀರ್ಣ ಭದ್ರತೆ ಮತ್ತು ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ ಹಠಾರಿ ಸೆಕ್ಯುರಿಟಿ ಸರ್ವಿಸಸ್ ರವರಿಗೆ ಭದ್ರತಾ ವ್ಯವಸ್ಥೆ ಒದಗಿಸಲು ದಿ:05/01/2005 ರಿಂದ ದಿ:04/10/2005 ರವರೆಗೆ ಹಾಗೂ cleaning and maintenances service ಗೆ ದಿ:01/01/2005 ರಿಂದ ದಿ:30/09/2005 ರವರೆಗೆ ತುಂಡು ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿರುತ್ತದೆ. ಈ ಮಧ್ಯೆ ಸದರಿ ಸಂಕೀರ್ಣವನ್ನು ಆರ್.ಎಂ.ಓ.ಟಿ. ಆಧಾರದ ಮೇಲೆ ಲಾಂಗ್ ಲೀಸ್ ನೀಡಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/230/ಎಂಎನ್‌ಜೆ/2004, ದಿ:21/06/2005 ರಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ದಿ:18/11/2005 ರಂದು ಮೆ॥ ಧವನಂ ಜ್ಯುವೆಲರ್ಸ್ ರವರೊಂದಿಗೆ 30 ವರ್ಷಗಳ ಅವಧಿಗೆ concession agreement ಅನ್ನು ಮಾಡಿಕೊಂಡಿರುತ್ತದೆ. ಆದರೆ, ಹಲವಾರು ತಾಂತ್ರಿಕ ಕಾರಣಗಳಿಂದ ಮೆ॥ ಧವನಂ ಜ್ಯುವೆಲರ್ಸ್ ರವರಿಗೆ ಕಟ್ಟಡವನ್ನು ಹಸ್ತಾಂತರಿಸುವಲ್ಲಿ ವಿಳಂಬವಾಗಿ ದಿ:20/04/2006 ರಂದು ಹಸ್ತಾಂತರಿಸಲಾಗಿರುತ್ತದೆ. ಆದರೆ, ದಿ:18/11/2005 ರಿಂದ ದಿ:20/04/2006 ರವರೆಗೆ ಕಟ್ಟಡದ ಭದ್ರತೆ ಮತ್ತು ಸ್ವಚ್ಛತೆಯನ್ನು ಕಾಪಾಡುವ ಅವಶ್ಯಕತೆಯಿದ್ದುದರಿಂದ ಈ ಹಿಂದೆ ಕಾರ್ಯಪಾಲಕ ಅಭಿಯಂತರರು (ಯೋಜನೆ) ರವರು ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಮೆ॥ ಹಠಾರಿ ರವರ ಸೇವೆಯನ್ನು ದಿ:04/10/2005 ರಿಂದ ದಿ:20/04/2006 ರವರೆಗೆ ಮುಂದುವರೆಸಲಾಗಿರುತ್ತದೆ. ಸದರಿಯವರಿಂದ ಭದ್ರತಾ ಸೇವೆಯನ್ನು ಪಡೆದಿರುವುದಕ್ಕೆ ಹಾಜರಾತಿ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿರುತ್ತದೆ.

ಸದರಿ ವಿಷಯದ ಸಲುವಾಗಿ ಭದ್ರತೆ ವ್ಯವಸ್ಥೆ ಒದಗಿಸಿದ್ದಕ್ಕೆ ರೂ.1,91,957.00 ಗಳು ಮತ್ತು ಸ್ವಚ್ಛತೆಯನ್ನು ಕೈಗೊಂಡಿರುವುದಕ್ಕೆ ರೂ.1,54,517.00 ಗಳ ಒಟ್ಟು ರೂ.3,56,474.00 ಗಳ ಅಂದಾಜು ಪಟ್ಟಿಗೆ ಅನುಮೋದನೆ ಹಾಗೂ ಸದರಿ ಭದ್ರತೆ ವ್ಯವಸ್ಥೆಯ ಸೇವೆಯನ್ನು ಮೆ॥ ಹಠಾರಿ ಸೆಕ್ಯೂರಿಟಿ ಸರ್ವಿಸಸ್ ರವರು ಕೈಗೊಂಡಿರುವುದಕ್ಕೆ ಸ್ಥಿರೀಕರಣ ಹಾಗೂ ಸದರಿ ಕೆಲಸದ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಭರಿಸಲು ಅನುಮೋದನೆ ಕೋರಿದ್ದು, ಸದರಿ ಕಾಮಗಾರಿಗೆ ದಿ:13/08/2009 ರಂದು ಕಾಮಗಾರಿ ಸಂಕೇತವನ್ನು ಪಡೆಯಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕೆಳಕಂಡ 2 (ಎರಡು) ಅಂಶಗಳಿಗೆ ಅನುಮೋದನೆ ಕೋರಿದೆ:

ಮಡಿವಾಳ ವಾಣಿಜ್ಯ ಸಂಕೀರ್ಣಕ್ಕೆ ದಿ:05/10/2005 ರಿಂದ 21/04/2006 ರವರೆಗೆ ಭದ್ರತಾ ವ್ಯವಸ್ಥೆ ಹಾಗೂ ಸ್ವಚ್ಛತೆ ಸೇವೆಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ನಿರೀಕ್ಷಿಸಿ ಕ್ರಮ ಕೈಗೊಂಡಿರುವುದಕ್ಕೆ ಸ್ಥಿರೀಕರಣ.

ದಿ:05/10/2005 ರಿಂದ ದಿ:21/04/2006 ರವರೆಗೆ ಭದ್ರತೆ ವ್ಯವಸ್ಥೆ ಒದಗಿಸಿದಕ್ಕೆ ಅಂದಾಜು ಮೊತ್ತ ರೂ.1,91,957.00 ಗಳು ಮತ್ತು ಸ್ವಚ್ಚತೆಯನ್ನು ಕೈಗೊಂಡಿರುವುದಕ್ಕೆ ಅಂದಾಜು ಮೊತ್ತ ರೂ.1,54,517.00 ಗಳ ಒಟ್ಟು ಮೊತ್ತ ರೂ.3,56,474.00 (ಮೂರು ಲಕ್ಷದ ಐವತ್ತಾರು ಸಾವಿರದ ನಾಲ್ಕುನೂರ ಎಪ್ಪತ್ತ್ನಾಲ್ಕು ನಾಲ್ಕು ಮಾತ್ರ) ಗಳನ್ನು ಮೆ॥ ಹರಾರಿ ಸೆಕ್ಯುರಿಟಿ ಸರ್ವೀಸಸ್ ರವರಿಗೆ ಪಾವತಿಸಲು ಅನುಮೋದನೆ.

ಮೇಲ್ಕಂಡ ಎರಡು (2) ಅಂಶಗಳ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14–05–2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:- ದಿನಾಂಕ: 14–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:- ದಿನಾಂಕ: 14–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(ಎಸ್. ಕೆ. ನಟರಾಜ)
ಮಹಾಪೌರರು